ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ಸಂಸತ್ತು

ಪತ್ರಿಕೆಯ ಹೆಸರು : NAME OF THE NEWS PAPER : ಪ್ರಜಾವಾಣಿ    ದಿನಾಂಕ : DATE : 16/06/2019

# ರಾಜ್ಯಸಭೆಯ 6 ಸ್ಥಾನಗಳಿಗೆ ಜುಲೈ 5ರಂದು ಚುನಾವಣೆ

ಪ್ರಜಾವಾಣಿ ವಾರ್ತೆ 16-6-19

ನವದೆಹಲಿ: ಬಿಜೆಪಿ ಅಧ್ಯಕ್ಷ ಅಮಿತ್ ಶಾ, ಸಚಿವೆ ಸ್ಮೃತಿ ಇರಾನಿ ಅವರು ಲೋಕಸಭೆಗೆ ಆಯ್ಕೆಯಾಗಿದ್ದರಿಂದ ತೆರವಾದ ಸ್ಥಾನಗಳೂ ಸೇರಿದಂತೆ ರಾಜ್ಯಸಭೆಯ ಆರು ಸ್ಥಾನಗಳಿಗೆ ಜುಲೈ 5ರಂದು ಉಪ ಚುನಾವಣೆ ನಡೆಯಲಿದೆ.

ಶನಿವಾರ ಈ ವಿಷಯ ಪ್ರಕಟಿಸಿದ ಚುನಾವಣಾ ಆಯೋಗ, 'ಉಪಚುನಾವಣೆ ನಡೆಯುವ ಸ್ಥಾನಗಳನ್ನು ಪ್ರತ್ಯೇಕ ಸ್ಥಾನ ಎಂದೇ ಪರಿಗಣಿಸಲಿದ್ದು, ಪ್ರತ್ಯೇಕವಾಗಿ ಚುನಾವಣೆಯನ್ನು ನಡೆಸಲಾಗುವುದು' ಎಂದು ಸ್ಪಷ್ಟಪಡಿಸಿದೆ.

ರವಿಶಂಕರ್ ಪ್ರಸಾದ್ (ಬಿಹಾರ), ಅಮಿತ್ ಶಾ, ಸ್ಮೃತಿ ಇರಾನಿ (ಇಬ್ಬರೂ ಗುಜರಾತ್) ಮತ್ತು ಅಚ್ಯುತ ಸಮಂತಾ (ಒಡಿಶಾ) ಅವರು ಲೋಕಸಭೆಗೆ ಆಯ್ಕೆ-ಯಾಗಿದ್ದರಿಂದ ರಾಜ್ಯಸಭೆಯ ನಾಲ್ಕು ಸ್ಥಾನಗಳು ತೆರವಾಗಿವೆ.

ಪ್ರತ್ಯೇಕವಾಗಿ ಉಪಚುನಾವಣೆ ನಡೆಸುವ ಆಯೋಗದ ನಿರ್ಧಾರದಿಂದ ಗುಜರಾತ್‌ನಲ್ಲಿ ಎರಡೂ ಸ್ಥಾನಗಳನ್ನು ಗೆಲ್ಲು ಬಿಜೆಪಿಗೆ ಮತ್ತು ಒಡಿಶಾದಲ್ಲಿ ಮೂರು ಸ್ಥಾನಗಳನ್ನೂ ಗೆಲ್ಲಲು ಬಿಜೆಡಿಗೆ ಸಾಧ್ಯವಾಗಲಿದೆ. ಆಯೋಗದ ಕ್ರಮವನ್ನು ಕಾಂಗ್ರೆಸ್ ಪಕ್ಷ ಟೀಕಿಸಿದೆ. ಗುಜರಾತ್‌ನಲ್ಲಿ ತೆರವಾಗಿರುವ ಎರಡು ಸ್ಥಾನಗಳಿಗೆ ಪ್ರತ್ಯೇಕವಾಗಿ ಚುನಾವಣೆ ನಡೆಸುವ ಮೂಲಕ ಒಂದು ಸ್ಥಾನವನ್ನು ಗೆಲ್ಲುವ ಅವಕಾಶವನ್ನು ಪಕ್ಷಕ್ಕೆ ನಿರಾಕರಿ-ಸಲಾಗಿದೆ ಎಂದು ಆರೋಪಿಸಿದೆ.

5